ಶ್ರೀ ಕಾಗೋಡು ತಿಮ್ಮಪ್ಪ.—ನಾನು ಅದನ್ನೆಲ್ಲಾ ಅವತ್ತೇ ಹೇಳಿದ್ದೇನೆ. ನಾನು ಹೇಳಿರುವುದು ಅವರಿಗೇ ಜ್ಞಾಪಕವಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ. - ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ, ಮಿಸ್‌ಯೂಸ್ ಆಫ್ ಸ್ಟೀಲ್ ಆಂಡ್ ಸಿಮೆಂಟ್ ಬಗ್ಗೆ ಕೆಲವು ಪ್ರಶ್ನೆಗಳನ್ನು ಕಳುಹಿಸಿದ್ದೆ. ನಾನು ಪ್ರಶ್ನೆಯನ್ನು ಕಳುಹಿಸಿ ಸುಮಾರು ೨೫ ದಿವಸಗಳಾಯಿತು. ಇದಕ್ಕೆಲ್ಲಾ ನಮ್ಮ ವಿಧಾನಸೌಧದಲ್ಲಿಯೇ ಉತ್ತರ ಸಿಕ್ಕುವಂಥವು.....

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ.

reg.—Observation from the Chair
re:—Publication of news item in a Kannada Daily

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಗೋಕಾಕ್ ವರದಿಯ ಬಗ್ಗೆ ಸರ್ಕಾರದವರು ತಮ್ಮ ನಿಲುವನ್ನು ತಿಳಿಸುತ್ತಾರೆಂದು ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರೂ, ಪತ್ರಿಕಾಕರ್ತರೂ ಬಂದಿದ್ದರು...

ಅಧ್ಯಕ್ಷರು.—I Would like to clarify. ತಾವು ದಯವಿಟ್ಟು ಕೂತುಕೊಳ್ಳಿ. ''ಪತ್ರಕರ್ತರು ಹೊಗಕ್ಕೆ'' ಎಂದು ಒಂದು ದೊಡ್ಡ ಶಿರೋನಾಮೆಯಲ್ಲಿ ಕನ್ನಡ ಪ್ರಭದಲ್ಲಿ ವರದಿಯಾಗಿದೆ. ಅದರಲ್ಲಿ ಒಂದು ಮಾತನ್ನು ಹೇಳಿದೆ. ವಿಧಾನ ಸಭೆಯಲ್ಲಿ ಸ್ಪೀಕರ್‌ರವರ್ದ್ದೇ ಅಂತಿಮ ಅಧಿಕಾರ—ಅವರ ಮಾತಿಗೆ ಎದುರೇ ಇಲ್ಲ, ಎಂದು ವರದಿಯಾಗಿದೆ. ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಪತ್ರಿಕಾ ಕರ್ತರನ್ನು ಅಲ್ಲಿಗೆ ಬಿಡಕೂಡದೆಂದು ನಾನು ಯಾರಿಗೂ ಹೇಳಿಲ್ಲ. ಪತ್ರಕರ್ತರನ್ನು ಬಿಡುವುದಕ್ಕೆ ಒಂದು ಕ್ರಮ ಇದೆ. ನಮ್ಮ ಸೆಕ್ರೆಟರಿಯವರು ಮತ್ತು ಪತ್ರಕರ್ತರ ಪ್ರತಿನಿಧಿಗಳೂ ಸೇರಿ ಮಾತನಾಡಿಕೊಂಡು ಯಾರು ಯಾರಿಗೆ ಪಾಸ್ ಕೊಡಬೇಕೆಂಬ ಬಗ್ಗೆ ಒಂದು ಕ್ರಮವನ್ನು ಅನುಸರಿಸುತ್ತಾರೆ. ಅದರ ಪ್ರಕಾರವೇ ನಾವೂ ಅವರಿಗೆ ಪಾಸ್ ಕೊಟ್ಟಿರುತ್ತೇವೆ. ಯಾರಾದರೂ ಅಧಿಕಾರಿ ಹೇಳಿದ್ದರೆ ಅದನ್ನು ನನ್ನ ಮುಂದೆ ಹೇಳಬಹುದಿತ್ತು. ಆದರೆ ನಾನೇ ಇದನ್ನು ಹೇಳಿದ್ದೇನೋ ಎನ್ನುವ ರೀತಿಯಲ್ಲಿ ಪತ್ರಕರ್ತರನ್ನು ಒಳಗೆ ಬಿಡಲೇ ಕೂಡದು ಎಂದು ನಾನು ಆಜ್ಞೆ ಮಾಡಿದ ರೀತಿಯಲ್ಲಿ ಮತ್ತು ಅದರಲ್ಲಿ ಅವರದ್ದೆ ಅಂತಿಮ ಅಧಿಕಾರ ಅವರ ಮಾತಿಗೆ ಎದುರೇ ಇಲ್ಲ ಎನ್ನುವ ರೀತಿಯಲ್ಲಿ ಬರೆಯತಕ್ಕಂಥದು ಅಷ್ಟು ಸರಿಯಾದುದಲ್ಲ. ಅವರು ಈ ರೀತಿ ಬರೆಯುವುದಕ್ಕೆ ಮುಂಚಿತವಾಗಿ ನನ್ನನ್ನು ಒಂದು ಮಾತು ಕೇಳಿ ಬರೆದಿದ್ದರೆ ಚೆನ್ನಾಗಿರುತ್ತಿತ್ತು. ''ಇಂಡಿಯನ್ ಎಕ್ಸ್‌ಪ್ರೆಸ್''ನಲ್ಲೂ ಕೂಡ ''ರಿಪೋರ್ಟರ್ಸ್ ಎಕ್ಸ್‌ಪೆಲ್ಡ್'' ಅಂತ ಒಂದು ಹೆಡ್ಡಿಂಗ್ ಕೊಟ್ಟು ಬರೆದಿದ್ದಾರೆ. ತಮಗೆಲ್ಲಾ ಗೊತ್ತೇ ಇದೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣವಾಗುವಾಗ, ಬಜೆಟ್ ಮಂಡಿಸುವಾಗ, ಅಥವಾ ಏನಾದರೂ ವಿಶೇಷವಾದಂಥ ವಿಚಾರಗಳೇನಾದರೂ ಇಲ್ಲಿ ಪ್ರಸ್ತಾಪವಾಗುವಾಗ ಗ್ಯಾಲರಿಗೂ ಜನರು ಬರುತ್ತಾರೆ, ಪತ್ರಕರ್ತರ ಸಂಖ್ಯೆಯೂ ಜಾಸ್ತಿ ಇರುತ್ತದೆ. ವಿ ಐ ಪಿ. ಗಳು ಬರುತ್ತಾರೆ. ಇಲ್ಲಿ ಆಸನಗಳ ಕೊರತೆ ಇರುವುದರಿಂದ ಅನೇಕರು ನಿಂತುಕೊಂಡಿದ್ದುದನ್ನು ನಾನು ನೋಡಿದ್ದೇನೆ. ಅಂಥ ದಿವಸದಲ್ಲಿ ನಾವು ಯಾವುದೇ ಅಡ್ಡಿಯನ್ನೂ ಮಾಡುವುದಿಲ್ಲ. ಆದರೆ ಕಾರಣಾಂತರದಿಂದ ನಿನ್ನೆ ಈ ಪ್ರಕರಣ ಜರುಗಿದೆ, ಮಾರ್ಷಲ್ ಈ ರೀತಿ ಹೇಳಿದರು ಅಂತ ವಿವರಣೆ ಕೊಟ್ಟಿದ್ದಾರೆ, ಆದರೆ ನೇರವಾಗಿ ನಾನೇ ಇದನ್ನು ಹೇಳಿದೆ. ಇದು ಅವರಿಗೆ ಗೊತ್ತಾಯಿತು ಎನ್ನುವ ರೀತಿಯಲ್ಲಿ ಬರೆಯುವುದು ಅಷ್ಟು ಸರಿಯಲ್ಲ. ಮತ್ತೆ ಪ್ರಜಾವಾಣಿ ಪತ್ರಿಕೆಯಲ್ಲೂ ಕೂಡ ತಾವು ಗಮನಿಸಬೇಕು. ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಸಂಪಾದಕೀಯ ಕಾಲಂನಲ್ಲಿ ಬರೆಯಲು ಅವರಿಗೆ ಪೂರ್ಣ ಹಕ್ಕು ಇರುತ್ತದೆ. ಬೇರೆ ಕಾಲಂನಲ್ಲಿ ಈ ಸಭೆಯಲ್ಲಿ ಏನು ನಡೆಯುತ್ತದೆ ಅದನ್ನು ಸರಿಯಾಗಿ ಫೇಸಿಂಗ್ ರಿಪೋರ್ಟ್ ಹಾಕತಕ್ಕಂಥದ್ದು ಅವಶ್ಯಕ ಇದನ್ನು ಸದನದ ಸಮಿಾಕ್ಷೆ ಎಂದು ಒಂದು ಬರುತ್ತದೆ ಅದು ಅವರದ್ದೇ ಆದ ರೀತಿಯಲ್ಲಿ ಬರುತ್ತದೆ. ಇಲ್ಲಿ ''ಮೇಲ್ಮನೆಯದೇ'' ಮೇಲುಗೈ ಎಂದರೆ ಏನು ಅರ್ಥ ಮತ್ತೆ ಎಲ್ಲ ವಿಚಾರಗಳಲ್ಲೂ ರಾಜ್ಯ ವಿಧಾನ ಮಂಡಲದ ''ಮೇಲ್ಮನೆಯದೇ ಮೇಲುಗೈ'' ಸರಕಾರ ತರುವ ಶಾಸನ, ಸೂತ್ರ, ನಿರ್ಣಯ, ವಿಷಯ ನಿರೂಪಣೆ, ವರದಿ—ಏನೇ ಆಗಲಿ ಅದರಲ್ಲಿರುವ ಹಂಳುಕನ್ನು ಎತ್ತಿ ತೋರಿಸುವುದರಲ್ಲಿ ಮೇಲ್ಮನೆಯಲ್ಲಿರುವ ''ವಿರೋಧ ಪಕ್ಷಗಳವರದು ಎತ್ತಿದ ಕೈ'' ಹಾಗೆಂದರೆ ಏನು ಅರ್ಥ. ಈ ಸದನದ ಸದಸ್ಯರು ನಿರ್ವಿರ್ಯರಾಗಿ ಕುಳಿತುಕೊಂಡು ೫೦ ರೂಪಾಯಿ

ಗಳನ್ನು ತೆಗೆದುಕೊಂಡು ಹೋಗುತ್ತಾರೆ ಎಂದು ಅರ್ಥವೇ? ನಾನು ಇಲ್ಲೂ ಹೇಳಿದ್ದೇನೆ. ಹೊರಗಡೆಯೂ ಹೇಳಿದ್ದೇನೆ. ಇದು ಬಹಳ ಸೂಕ್ಷ್ಮವಾದ ವಿಚಾರ. ಇದರ ಬಗ್ಗೆ ಅಭ್ಯಾಸ ಮಾಡಿರಬೇಕಾಗುತ್ತದೆ. ಇದು ಎಲ್ಲಿ ಹೋಗುತ್ತದೆ, ಯಾವ ಬಾರ್ಡರ್‌ನಲ್ಲಿ ನಿಲ್ಲುತ್ತದೆ; ಹೀಗೆಂದು ಬರೆದಿದ್ದಾರೆ, ಬರೆಯುತ್ತಾರೆ; ಹೀಗೆಯೇ ಬರೆದರೆ ಹೇಗೆ ? ಇನ್ನೊಂದು ಕಡೆ ನಿರ್ಣಯದ ಅಂಗೀಕಾರ ಸ್ನೇಹ ಸಂಗೀತದಂತೆ ಆಯಿತು ಎಂದಿದೆ. ಪತ್ರಿಕೆಯಲ್ಲಿ ರಿಪೋರ್ಟ್ ಮಾಡಿರತಕ್ಕಂಥದ್ದು ಅವರು ಹೇಳತಕ್ಕಂಥ ರೀತಿಯಲ್ಲಿ ರಿಪೋರ್ಟ್ ಮಾಡಬೇಕೆಂದು ಇದೆಯೇ ? ಇದು ಅಲ್ಲ, ಅಭಿಪ್ರಾಯ ಕೊಡುವಾಗ ಬಹಳ ತೂಕವಾಗಿ ಇರತಕ್ಕಂಥ ಅಭಿಪ್ರಾಯವನ್ನು ಕೊಡಬೇಕು. ಪತ್ರಿಕೆಗಳಿಗೆ ಗೌರವ ದೊರಕತಕ್ಕಂತ ರೀತಿಯಲ್ಲಿ ಅಭಿಪ್ರಾಯವನ್ನು ಕೊಡಬೇಕು ಹೀಗೆ ಮಾಡಿದರೆ ಏನಾಗುತ್ತದೆ. ನಾನು ಈ ಮನೆಯ ಸದಸ್ಯನಾಗಿದ್ದೇನೆ. ಈ ಮನೆಯ ಅಧ್ಯಕ್ಷನಾಗಿಯೂ ಇದ್ದೇನೆ. ಈ ಮನೆಯ ಹಕ್ಕುಬಾಧ್ಯತೆಯನ್ನು ಕಾಪಾಡುವಲ್ಲಿ ನಾನಿಲ್ಲಿ ಕೇಂದ್ರೀಕೃತವಾಗಿದ್ದೇನೆ. ಹಿಂದೆ ಒಂದು ಸಾರಿ ಕೂಡ ಪತ್ರಿಕೆಗಳಿಗೆ ಹೇಳಿರುತ್ತೇನೆ. ಈ ರೀತಿ ಬರೆದಿರತಕ್ಕಂಥದ್ದು ಏನಾಗುತ್ತದೆ. ಮಾನ್ಯ ಸದಸ್ಯರು ಆದರಲ್ಲೂ ಕೂಡ ಬಹಳ ಜವಾಬ್ದಾರಿಯುತವಾಗಿ ಇರತಕ್ಕಂಥವರು, ನೇರವಾಗಿ ಜನರಿಂದ ಚುನಾಯಿತರಾಗಿ ಬಂದಿರತಕ್ಕಂಥವರು ಇಂಥ ಸದಸ್ಯರು ಹಾಗೆಯೇ ಮಾತನಾಡಬೇಕು. ಹೀಗೆಯೇ ಮಾತನಾಡಬೇಕು ಎನ್ನುವುದು ಏನೂ ಇಲ್ಲ. ವಿರೋಧಪಕ್ಷದವರೂ ಕೂಡ ಯಾರ ಹಂಗು ಇಲ್ಲದೆ, ಯಾರ ಅಡ್ಡಿ ಆಡಚಣೆಗಳು ಇಲ್ಲದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡತಕ್ಕಂಥ ಪೂರ್ಣ ಅಧಿಕಾರ ಇರುತ್ತದೆ. ಹೀಗಿರುವಾಗ ಸಾರ್ವಜನಿಕ ಹಿತದೃಷ್ಟಿಯಿಂದ ವಿಮರ್ಶೆ ಮಾಡತಕ್ಕಂಥದ್ದ ಈ ರೀತಿಯಲ್ಲಿ ಅಧಿಕಾರ ಇರಬಹುದು, ''ಸ್ನೇಹ ಸಂಗೀತ''ದಂತೆ ಎಂದರೆ ಏನು ಅರ್ಥ ? ಇದು ಇನ್‌ವರ್ಟೆಡ್ ಕಾಮಾದಲ್ಲಿ ಕೊಟ್ಟಿರುತ್ತಾರೆ. ನಾವು ಇದನ್ನು ನೋಡಿದಾಗ ಮನಸ್ಸಿಗೆ ತುಂಬಾ ನೋವುಂಟುಮಾಡಿದೆ. ಇದನ್ನೆಲ್ಲ ಮಾನ್ಯ ಸದಸ್ಯರು ಎಷ್ಟರವಂಟ್ಟಿಗೆ ಓದಿದ್ದಾರೋ ಗೊತ್ತಿಲ್ಲ.

SRI H. D. DEVEGOWDA.—I am not referring to you only. Is the House in such a helpless position ?

ಅಧ್ಯಕ್ಷರು.—ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ನಾನು ಕೂಡ ಹೆಲ್‌ಪಲೆಸ್ ಅಲ್ಲ. This House is very supreme. It is all powerful. It has got its own rights and privileges. ಶಿಕ್ಷೆ ಕೊಡತಕ್ಕಂಥ ಅಧಿಕಾರ ಕೂಡ ಈ ಮನೆಯ ಗೌರವವಾಗಿರುತ್ತದೆ. ತಾವು ಮಾತನಾಡುವಾಗ ಯಾವ ಬದುವಿನಲ್ಲಿದ್ದೇವೆ, ಎಲ್ಲಿ ಇದ್ದೇವೆ ನಮ್ಮ ಮಾತು ಎಲ್ಲಿ ಹೋಗುತ್ತದೆ ಎಂದು ಹತ್ತು ಸಾರಿಯಲ್ಲ ನೂರುಸಾರಿ ವಿಚಾರ ಮಾಡಿ ನೋಡಬೇಕಾಗುತ್ತದೆ. ಎಲ್ಲಿಹೋದರೆ ಅನಾಹುತವಾಗುತ್ತದೆ ಎಂಬುದನ್ನು ಯೋಚನೆ ಮಾಡಿ ಬರೆಯಬೇಕು. ಲಘುವಾಗಿ ತೆಗೆದುಕೊಳ್ಳಬಾರದು. ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಮತ್ತೆ ಇನ್ನೊಂದು ಮಾತನ್ನು ಹೇಳುತ್ತೇನೆ, ಪತ್ರಿಕಾ ವರದಿಗಾರರು ಅಂದು ಏಳು ಮುಂಕ್ಕಾಲು ಗಂಟೆಯವರೆಗೆ ಇದ್ದರು ಎಂದು ಕಾಣುತ್ತದೆ. ಸಭೆಯೂ ಕೂಡ ಏಳುಮುಕ್ಕಾಲು ಗಂಟೆಗೆ ಎದ್ದಿತು ಎಂದು ಕಾಣುತ್ತದೆ. ಎದ್ದನಂತರ ನನ್ನ ಕೊಠಡಿಯಲ್ಲಿ ಸುಮಾರು ೫೦ ನಿಮಿಷಗಳ ಕಾಲ ಇದ್ದೆ. ಈ ವಿಷಯ ಅವರು ನನಗೆ ತಿಳಿಸಿದ್ದರೆ ನಾನು ಕೂಡ ಹೇಳುತ್ತಿದ್ದೆ; ಆ ರೀತಿ ಏನಾದರೂ ತೊಂದರೆಯಾಗಿದ್ದರೆ I would have really apologised on behalf of my office and I would have taken up the matter. ಮತ್ತೆ ನಾನು ಏನು ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿದ್ದೆ. ಆದರೆ ಇಲ್ಲಿ ಏನಾಯಿತು ಅಂದರೆ ಈ ನಿರ್ಣಯ ಬರತಕ್ಕಂಥ ಸಮಯದಲ್ಲಿ ನೀವು ಪತ್ರಿಕಾ ವರದಿಗಾರರನ್ನು ಬಿಡದೆ ಇರತಕ್ಕಂಥ ರೀತಿಯಲ್ಲಿ ಆಜ್ಞೆ ಕೊಟ್ಟಿದ್ದಾರೆ ಎನ್ನುವ ವಿಚಾರ ರಾಜ್ಯದಲ್ಲಿರತಕ್ಕಂಥ ಜನ ಉದ್ವಗಲ ಹೊದತಕ್ಕಂಥ ಪರಿಸ್ಥಿತಿ ಬಂದಿತು. ಆದರಲ್ಲೂ ಕೂಡ ಕನ್ನಡಪ್ರಭಾದಲ್ಲಿ ಅಂದರೆ ಇದು ಒಂದು ದೊಡ್ಡ ಪತ್ರಿಕೆ ಇದರಿಂದ ಎಷ್ಟರವಂಟ್ಟಿಗೆ, ಯಾವ ರೀತಿ ಪರಿಣಾಮ ಬರಬಹುದು ಎನ್ನುವುದನ್ನು ಯೋಚನೆ ಮಾಡಬೇಕು. ಆದ್ದರಿಂದ ನಾನು ಮಾನ್ಯ ಪತ್ರಿಕಾ ವರದಿಗಾರರಿಗೆ ಹೇಳುತ್ತೇನೆ, ಯಾವ ಒಂದು ವಿಚಾರವನ್ನೂ ಬಹಳ ಹುಷಾರಿನಿಂದ ಯೋಚನೆ ಮಾಡಿ ಪತ್ರಿಕೆಗಳಲ್ಲಿ ವರದಿ ಮಾಡತಕ್ಕಂಥದಲ್ಲಿ ಯೋಗ್ಯ ಮತ್ತ ಉತ್ತಮವೆಂದು ಹೇಳುತ್ತೇನೆ. ಮತ್ತೆ ಇದೇ ರೀತಿ ಮುಂದುವರಿಸಿಕೊಂಡು ಹೋಗುತ್ತೇವೆಂದರೆ ಕಾನೂನಿನಪ್ರಕಾರ ನಾವು ಇದರ ಬಗ್ಗೆ ನಿರ್ಣಯವನ್ನು

ಸಭೆಯ ಮುಂದೆ ತರಬೇಕಾಗುತ್ತದೆ. ಸಭೆ ಏನು ತೀರ್ಮಾನ ತೆಗೆದುಕೊಳ್ಳುತ್ತದೋ ಆ ತೀರ್ಮಾನಕ್ಕೆ ನಾವೆಲ್ಲ ತಲೆಬಾಗಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಈ ವಿಷಯದ ಬಗ್ಗೆ ಅನುಮತಿಯನ್ನು ಕೋರಿ ಪ್ರಸ್ತಾಪ ಮಾಡತಕ್ಕಂಥ ಮುಖ್ಯವಾದ ಉದ್ದೇಶ ಇಷ್ಟೆ. ಸಂಸದೀಯ ವ್ಯವಹಾರಗಳ ಬಗ್ಗೆ ಈ ಸಭೆಯಲ್ಲಿ ನಡೆಯುತಕ್ಕಂಥ ನಡವಳಿಕೆಗಳನ್ನು ಹೊರಗಡೆ ಇರತಕ್ಕಂಥ ಸಾರ್ವಜನಿಕರಿಗೆ ತಿಳುವಳಿಕೆ ಕೊಡುವಂಥ ಕೆಲಸ ಮಾಡತಕ್ಕಂಥದ್ದು, ಸಂವಿಧಾನಬದ್ಧವಾದ ಕಾರ್ಯವನ್ನು ನಿರ್ವಹಿಸುವುದಕ್ಕೋಸ್ಕರವಾಗಿ, ಪತ್ರಿಕಾಕರ್ತರು ರಹದಾರಿಯನ್ನು ಪಡೆದು ಇಲ್ಲಿ ಬರತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಿನ್ನೆ ಒಂದು ಅಪೂರ್ವ ಸಂದರ್ಭದಲ್ಲಿ ಜಾಸ್ತಿ ಜನ ಪತ್ರಿಕಾ ವರದಿಗಾರರು ಬಂದಿರತಕ್ಕಂಥದ್ದು ನಿಜವಿತ್ತು. ಆದರೆ ಅವರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡತಕ್ಕಂಥದ್ದು ತಮ್ಮ ಕರ್ತವ್ಯವಾಗಿತ್ತು. ತಾವು ಹೇಳಿದಿರಿ ಎಂದು ಮಾರ್ಷಲ್ ಹೇಳುತ್ತಾರೆ. ಅದನ್ನು ನಾನು ಹೇಳುತ್ತಿಲ್ಲ, ಈ ರೀತಿ ಅಭಿಪ್ರಾಯವನ್ನು ಮಾರ್ಷಲ್‌ರವರು ಹೊರಕ್ಕೆ ಹಾಕತಕ್ಕಂಥ ರೀತಿಯಲ್ಲಿ ಹೇಳಿದರು. ಇಲ್ಲಿ ನಿಂತು ಕೊಳ್ಳುವುದಕ್ಕೆ ಆಗುವುದಿಲ್ಲ. ಜಾಗ ಇಲ್ಲ ನಿಂತುಕೊಳ್ಳಬಾರದು ಎಂದು ಹೇಳಿದ್ದು ತಮ್ಮ ಆದೇಶವೇ ಇರಬಹುದೇಂಬ ಅಭಿಪ್ರಾಯ ಅವರಿಗೆ ಬಂದಿರುತ್ತದೆ. ನಾನು ತಮ್ಮಲ್ಲಿ...

ಅಧ್ಯಕ್ಷರು.—ಅವರು ಹೇಳಿದ್ದಾರೆ. ಮಾರ್ಷಲ್ ಯಾರೂ ಹೇಳಿದ್ದಾರೆ ಎನ್ನುವುದನ್ನು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನೊಂದು ವಿಚಾರ ಜಾಸ್ತಿ ಜನ ಬಂದ ಸಮಯದಲ್ಲಿ,

ಅಧ್ಯಕ್ಷರು.—ಅದಕ್ಕೆ ಒಂದು ಕ್ರಮ ಇದೆ. ನೀತಿ ಇದೆ. ದಯವಿಟ್ಟು ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ನೀತಿಬಿಟ್ಟು ಹೋಗಬೇಕೆಂದು ಹೇಳುತ್ತಿಲ್ಲ.

ಅಧ್ಯಕ್ಷರು.—ಪತ್ರಿಕಾ ಪ್ರತಿನಿಧಿಗಳು ಮತ್ತು ನಮ್ಮ ಕಾರ್ಯದರ್ಶಿಗಳು ಇರತಕ್ಕಂಥ ಒಂದು ಸಮಿತಿ ಇದೆ. ಅವರು ಪ್ರತಿವರ್ಷ ಯಾರು ಯಾರಿಗೆ ಐಡೆಂಟಿಟಿ ಕಾರ್ಡ್ ಕೊಡಬೇಕು, ಎಷ್ಟು ಕೊಡಬೇಕು ಎನ್ನುವುದಕ್ಕೆ ತೀರ್ಮಾನವನ್ನು ತೆಗೆದುಕೊಂಡು ಅದರ ಪ್ರಕಾರ ಯಾರು ಯಾರಿಗೆ ಕೊಟ್ಟಿರುತ್ತಾರೋ ಅವರು ಬರುತ್ತಾರೆ ಅವರಿಗೆ ಪ್ರವೇಶಾವಕಾಶವಿರುತ್ತದೆ. ಇದು ಸುಮಾರು ವರ್ಷಗಳಿಂದ ನೋಡಿದ್ದೇವೆ. ಈ ಮನೆಯಲ್ಲಿ ಗೌವರ್ನರ್ ಅಡ್ರೆಸ್ ಆಗುವಾಗ ಬಜೆಟ್ ಮಂಡನೆ ಮಾಡುವಾಗ ವಿಶೇಷವಾಗಿ ಪತ್ರಿಕಾ ವರದಿಗಾರರು ಬರತಕ್ಕಂಥದ್ದನ್ನು ನಾವು ನೋಡಿದ್ದೇವೆ. ನಿನ್ನೆ ಆಕಸ್ಮಾತ್ ಏನೋ ನಡೆದಿರಬಹುದು. ಯಾರೋ ಹೇಳಿರಬಹುದು. ಆದರೆ ಅದನ್ನು ನನ್ನ ಗಮನಕ್ಕೆ ತಂದಿದ್ದರೆ ಚೆನ್ನಾಗಿರುತ್ತಿತ್ತು. ಇಲ್ಲಿ ಏನಾಯಿತು ಎಂದರೆ ನಾವು ಪ್ರಮುಖವಾದಂಥ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಸಮಯದಲ್ಲಿ ತಾವು ವರದಿದಾರರಿಗೆ ಅಡ್ಡಿ ಬರುವಂಥ ರೀತಿಯಲ್ಲಿ ಮಾಡಿದ್ದೇವೆಂದು ಬಂದಿದೆ.

ಶ್ರೀ ಎ ಲಕ್ಷ್ಮೀಸಾಗರ್.—ಹೆಚ್ಚಿನ ಜನರು ಬಂದರೆ ಬೇರೆ ಜನರು ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು ಒಂದು ಕ್ರಮ,

ಅಧ್ಯಕ್ಷರು.—ಮುಂಚಿತವಾಗಿ ಹೇಳಿದ್ದರೆ ಈ ಪ್ರಶ್ನೆ...

ಶ್ರೀ ಎ. ಲಕ್ಷ್ಮೀಸಾಗರ್.—ಎರಡನೆಯ ಪ್ರಶ್ನೆ ಏನೆಂದರೆ, ಪ್ರೇಕ್ಷಕರ ಗ್ಯಾಲರಿಯಲ್ಲಿ, ರಿಪೋರ್ಟರ್ ಗ್ಯಾಲರಿಯಲ್ಲಿ ಕೆಲವು ಸಿ ಐ. ಡಿ. ಗಳು ಬಂದು ಕುಳಿತುಕೊಳ್ಳುತ್ತಾರೆ. ಆಮೇಲೆ ಸರ್ಕಾರಿ ಅಧಿಕಾರಿಗಳೂ ಕೆಲವರು ಬಂದು ಕುಳಿತುಕೊಳ್ಳುತ್ತಾರೆ. ಸಿ. ಐ. ಡಿ. ಗಳು ರಿಪೋರ್ಟರ್ ಗ್ಯಾಲರಿಯಲ್ಲಿ ಬಂದು ಕುಳಿತುಕೊಳ್ಳುವುದು ನಮ್ಮಮೇಲೆ ತನಿಖೆಗೆ ಬಂದಿರುತ್ತಾರೋ ಅಥವಾ ಪತ್ರಿಕಾಕರ್ತರ ಮೇಲೆ ಏನಾದರೂ ಸೂಪರ್‌ವೈಸಿಂಗ್ ಮಾಡುವುದಕ್ಕೆ ಬಂದಿರುತ್ತಾರೋ ಎನ್ನುವ ಪ್ರಶ್ನೆ ? ಇದು ಒಂದು ದೊಡ್ಡ ಪ್ರಶ್ನೆಯಲ್ಲ, ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇಂಥ ಸಂದರ್ಭಗಳಲ್ಲಿ ಅವರು ಬಂದು ಕುಳಿತುಕೊಂಡರೆ ಸ್ಥಳಕ್ಕೆ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ವಿಚಾರವೇ ಬೇರೆ, ನೀವು ಹೇಳತಕ್ಕಂಥ ವಿಚಾರವೆ ಬೇರೆಯಾಗಿರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಪತ್ರಿಕಾಕರ್ತರು ಬಂದು ಕಂಳಿತಂಕೊಳ್ಳುವುದಕ್ಕೆ ಜಾಗವೇ ಇಲ್ಲ. ಅವರು ಬಂದರೆ ಅವರನ್ನು ಹೊರಗೆ ಹಾಕಿ ಎಂದರೆ...

ಅಧ್ಯಕ್ಷರು.—ಅವರನ್ನು ಹೊರಗೆ ಹಾಕಿ ಎಂದು ಯಾರಿಗೂ ಹೇಳಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇಂಥದಕ್ಕೆ ಅವಕಾಶಕೊಡಬಾರದು, ಇದರಿಂದ ತಪ್ಪು ಕಲ್ಪನೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ, ವಾಸ್ತವಾಂಶ ಹೀಗಿದ್ದುದರಿಂದ ಅವರು ತಮ್ಮ ದುಃಖವನ್ನು ಹೇಳಿಕೊಂಡಿದ್ದಾರೆ, ಇದು ಉತ್ಪ್ರೇಕ್ಷೆಯಲ್ಲ.

ಅಧ್ಯಕ್ಷರು.—ದುಃಖ ಯಾವ ರೀತಿ ಆಗುತ್ತದೆ. ಅವರಿಗೆ ದುಃಖವಾಯಿತು ಎಂದು ನನ್ನ ಮೇಲೆ ಹೇಳುವುದೇ ?

SRI A. LAKSHMISAGAR.—I am not saying that. I am not saying about their expressions. All that I am trying to bring to your notice is...

MR. SPEAKER.—What is the caption that is given ? "Reporters Expelled"

SRI A. LAKSHMISAGAR.—My information is that they were actually pushed out.

MR. SPEAKER.—Pushed out by the Speaker ?

SRI A. LAKSHMISAGAR.—Presumably on the directions of the Speaker that is according to the Marshal. I am not saying anything against you.

ಅಧ್ಯಕ್ಷರು.—ಹಾಗಾದರೆ ಈ ಮಾತಿಗೆ ತಾವು ಏನು ಹೇಳುತ್ತೀರಿ ?

"ವಿಧಾನ ಸಭೆಯಲ್ಲಿ ಸ್ಪೀಕರ್ ಅವಗದ್ದೇ ಅಂತಿಮ ನಿರ್ಧಾರ" ಎಂದು ಇನ್‌ವರ್ಟ್‌ಡ್ ಕಾಮದೊಳಗೆ ಕೊಟ್ಟಿದ್ದಾರೆ; ಮತ್ತೆ ಮೇಲುಗಡೆ ಹೇಳಿದ್ದಾರೆ. ಸ್ಪೀಕರ್ ಸಾಹೇಬರವರ ಅಪ್ಪಣೆ ಯಾಗಿದೆ. ಇಲ್ಲಿ ಯಾರು ನಿಲ್ಲಬಾರದು. ಕೂಡಲು ಜಾಗ ಇಲ್ಲದವರು ಹೊರಕ್ಕೆ ತೆರಳಿ—ಪೋಲೀಸ್ ಆಜ್ಞೆ ಅದೂ ಇಂಗ್ಲೀಷ್ ಭಾಷೆಯಲ್ಲಿ. ಯಾರು ಹೇಳಿದರು ಅಂತ ಅವರನ್ನೂ ಕೂಡ ಕೋಟ್ ಮಾಡಿದ್ದಾರೆ. ಮುಂದೆ ಸ್ಪೀಕರ್‌ರವರದ್ದೇ ಅಂತಿಮ ಅಧಿಕಾರ, ಅವರ ಮಾತಿಗೆ ಎದುರೇ ಇಲ್ಲ ಎಂದರೆ ಏನು ಅರ್ಥ.?

3-00 P.M.

SRI A. LAKSHMISAGAR.—My submission is confined only to...

MR. SPEAKER.—Whether the leader of the Opposition wants to say that...

(Interruption)

SRI A. LAKSHMISAGAR.—No, Sir. I am far from it. Sir, please hear with me. My submission confines to the fact of marshal having told some of the reporters to go out.

MR. SPEAKER.—That is a different matter. I am going to deal with in a different way.

(Interruption)

SRI A. LAKSHMISAGAR.—Sir....

MR. SPEAKER.—In fact, they might have been offended if they have been told like that. I don't say that they were not offended.

(Interruption)

SRI A. LAKSHMISAGAR.—Sir, my submisson is confined only to that aspect of the matter. I am not saying anything about other matters that you were kind enough to refer. My submission is, they should not be put to hardship. Some steps may kindly be taken. That is all my submission.

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್.—ಪ್ರಜಾವಾಣಿಯ ಶಿರೋನಾಮೆಯಲ್ಲಿ ಬಂದಿರತಕ್ಕ ದ್ದನ್ನು ಬೆಳಿಗೆ ನೋಡಿದಾಗ ನಾನು ಮತ್ತು ನಕ್ಕ ಕೆಲವು ಗೆಳೆಯರು ಈ ಬಗ್ಗೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಲು ತೀರ್ಮಾನಿಸಿದ್ದೇವೆ. ಆದರಲ್ಲಿ ಎಷ್ಟರಮಟ್ಟಿಗೆ ಪ್ರಸ್ತಾಪ ಮಾಡಿದ್ದಾರೆಂದರೆ, ಆದು ಸದನದ ಹಕ್ಕುಚ್ಯುತಿಗೆ ಶಿಡ್ಡಿ ಬರೋಲ್ಲವೇ ಎಂದು ತಮ್ಮನ್ನು ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ.

SRI C. M. ARUMUGHAM.—Sir, I have got one submission. The regulation of entry into the Press gallery, visitors gallery is governed, and controlled by the Speaker, and also seating arrangements etc. But my point is, can any Press, as a matter of fact, report or write against any arrangement in the House pertaining to press gallery ? It is a reflection on the House and a reflection on the Speaker. They should report regarding the proceedings of the House. They should report regarding the inconvenience caused to them. that is not the proceedings of the House. They can write it outside the House. Inside the House they are only expected to report the proceedings of the House. Sir, kindly take your own time and give your ruling. they cannot write against the Speaker and against the House. That is my contention. Sir, yesterday, all those who occupied the Press gallery whether they were representatives of the Press or not, is a matter to be verified by you. There was large crowd. If they are not press representatives, if they are not Ex M,L.As, if they are not Ex M.P.s. others cannot take action. Take for instance officers gallery. Can anybody shout from officers gallery ? Is it possible ? That is also part of the House. If anybody shouts this House is entitled to take action. Press gallery also forms part of the House. They cannot write about themselves. They are not reporting what has happened. They are reporting about themselves They are reporting that they have no chairs and they were asked to go out. It is a question involving the prestige and privilege of the House. This House is supreme They cannot say that the opposition is not good and opposition is not bad. Even if they appreciate. I don't care. I don't care for any compliments from anybody. This is not a question of opposition or ruling party. It is a question pertaining to the House itself and the Speaker. The

Speaker is involved and Speaker's name is dragged in. Therefore, Sir, kindly see whether something could be done to stop this. would also like to tell you another point. We can regulate as to how they should report, and how they should write also. They must report what is going on here. They cannot write with regard to somebody or thy cannot omit another. Sir, in the All India Radio some names are mentioned and some names are not mentioned and we are not bothered about publicity. Sir, as a press reporter and as a press representative they must do their job without any bias and without any animosity and without any prejudice against any member any party, be it ruling or opposition. Everybody is a member here. Sir, I am raising this issue again day after tomorrow. But, you being a veteran parlimentarian, kindly see whether that could be done because I have not come across, I have been a member of this House since the last 15 years I also read Hindu, Indian Express, Deccan Herald and when I go to New Delhi I read northern papers, any writing about the visitors gallery or press gallery anywhere in the country. But that has happened here yesterday. Today it has appeared in the newspapers. If there are no seats, we can't help it. We can say, sorry, that is all. They can go to the visitors gallery. if there are no seats have we cannot create seats. Sir, of late, so many new newspapers, dailies have come and we cannot create seats for all af them. Probably, they might not have foreseen at the time of construction of this building that so many newpapers will come. Should it form part of their report ? It reflects the Chair. It is the question of privilege of the House. The Chair has to take some action about it.

SRI AZEEZ SAIT.—Sir, it is a shame that the Press people were treated like that. The name of the Speaker is involved. It is stated that Marshal at the orders of the Speaker has asked the Press people to go out. It is a very shameful act. Sir, the Marshal is a very arrogant fellow. That is why all the trouble started.

MR. SPEAKER.—That is a different matter. I don't know whether you were here when I made a reference to it.

SRI AZEEZ SAIT.—Sir, the Marshal is a very arrogant man. He behaves like a policeman. That is all the trouble.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ, ಈಗ ಕೆಲವು ಸದಸ್ಯರುಗಳು ವಿಷಯವನ್ನು ಪ್ರಸ್ತಾಪ ಮಾಡಿರುವುದು ಸಂತೋಷ. ಪದೇ ಪದೇ ಈ ವಾದ ಬರುತ್ತಿದೆ. ಈ ಸಮಯದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಈ ಸದನದಲ್ಲಿ ಯಾವ ಸದಸ್ಯರು ಏನು ಮಾತನಾಡುತ್ತಾರೆ ಅದನ್ನು ಪೂರ್ಣವಾಗಿ ಜನತೆಗೆ ತಿಳಿಸತಕ್ಕ ಸಾಧನ, ಪತ್ರಿಕೆ ಆದರೆ ದುರ್ದೈವ ಇವತ್ತು ಏನಾಗಿದೆ ಅಂದರೆ, ಜನ ಎಂಥಹವರು ಎಂದು ಲೆಕ್ಕದಲ್ಲಿಟ್ಟುಕೊಂಡರೆ ಹೇಗೆ ? ನಮ್ಮ ಆಡಳಿತ ಪಕ್ಷದವರು ಮಾತನಾಡಿದ್ದನ್ನು ಹಾಕುವುದು ಬೇಡ. ಮೊನ್ನೆ ಮಾನ್ಯ ದೇವೇಗೌಡರು ಸಹಕಾರ ಇಲಾಖೆಯ ಮೇಲೆ ಬಹಳ ಅತ್ಯುತ್ತಮವಾದ ಭಾಷಣ ಮಾಡಿದರು ; ಅವರು ಮಾಡಿದ

ಭಾಷಣವನ್ನು ಒನೇ ಪುಟದ ಒನೇ ಕಾಲಂನಲ್ಲಿ ಹಾಕಿದ್ದಾರೆ. ಅದೇ ದೇಶಪಾಂಡೆಯವರು ಸ್ವಲ್ಪವೇ ಮಾತನಾಡಿದರೂ ಅದನ್ನು ಎಳೆದು ಎಳೆದು ಮೊದಲ ಪುಟದಲ್ಲಿಯೇ ಹಾಕತಕ್ಕ ಪ್ರವೃತ್ತಿ ಆ ಒಂದು ತತ್ವ ಪತ್ರಿಕೆಗಳಲ್ಲಿ ನಿಂತರೆ ಓದತಕ್ಕಂತಹ ಜನಗಳಿಗೆ ಅಭಿರುಚಿ ಇರುತ್ತದೆಯೆ ? ರೂಲಿಂಗ್ ಪಾರ್ಟಿಯಲ್ಲಿರುವ ಸದಸ್ಯರು ಹೇಳಿದ್ದನ್ನು ಹಾಕದಿದ್ದರೂ ಬೇಡ, ಆದರೆ ವಿರೋಧಪಕ್ಷದಲ್ಲಿರುವಂತಹ ಶೂದ್ರರು ಹೇಳುವಂತಹ ವಿಚಾರಗಳನ್ನು ವರದಿ ಮಾಡಿದರೆ ಜನರು ಓದುತ್ತಾರೆ. ಕೇವಲ ಬಿ ಜೆ.ಪಿ. ಸದಸ್ಯರಿಗೆ ಮಾತ್ರ ಪ್ರಚಾರ ಕೊಟ್ಟು ಬೇರೆ ಸದಸ್ಯರು ಹೇಳಿದ್ದಕ್ಕೆ ಪ್ರಚಾರ ಕೊಡದೆ ಇತರೇ ವಿರೋಧ ಪಕ್ಷದವರನ್ನು ವೀಕ್ ಮಾಡಲು ಹೋಗಬೇಡಿ ಎಂದು ಪ್ರೆಸ್‌ನವರಿಗೆ ತಮ್ಮ ಮೂಲಕ ಹೇಳುತ್ತೇನೆ. ಈ ಕಾರಣದಿಂದ ಇಲ್ಲಿ ಯಾವ ಸದಸ್ಯರು ಏನು ಪ್ರಸ್ತಾಪ ಮಾಡುತ್ತಾರೋ ಅದನ್ನು ಅವರು ಪೂರ್ಣವಾಗಿ ವರದಿ ಮಾಡಲು ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಪ್ರೆಸ್‌ನವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕೆಲವೇ ಪತ್ರಿಕೆಗಳಲ್ಲಿ ಈ ರೀತಿ ಸದನ ಸಮೀಕ್ಷೆ ಕಾಲಂನ್ನು ಬರೆಯುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ. ಇಂಗ್ಲೀಷ್ ಪತ್ರಿಕೆಗಳಲ್ಲಿಯೂ ಸಹ.....

ಅಧ್ಯಕ್ಷರು.—ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಈ ಹಿಂದೆ ಗ್ಯಾಲರಿ–ಮ್ಯಾನ್ ಎಂದು ಬರುತ್ತಿತ್ತು.

ಶ್ರೀ ಎಚ್. ಡಿ. ದೇವೇಗೌಡ. —ಈ ಮೊದಲು ಪತ್ರಿಕೆಗಳಲ್ಲಿ ವಿಕೃತವಾದಂಥ ವರದಿ ಬಂದಾಗ ನಾನು ತಮಗೆ ಪ್ರಿವಿಲೇಜ್ ಮೋಷನನ್ನು ಕಳುಹಿಸಿಕೊಟ್ಟಿದ್ದೆ. ಇಡೀ ಸದನಕ್ಕೇ ಅವಮಾನ ಮಾಡುವಂತಹ ಲೇಖನವನ್ನು ಪತ್ರಿಕೆಗಳಲ್ಲಿ ಬರೆಯುವ ಬಗ್ಗೆ ನಾನು ದುಃಖದಿಂದ ಹೇಳುವುದಾದರೆ, ನೆನ್ನೆ ದಿವಸ ಇಲ್ಲಿ ನಡೆದಿದ್ದಾದರೂ ಏನು ? ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಎಲ್ಲ ರಾಜಕೀಯ ಪಕ್ಷಗಳ ಮುಖಂಡರನ್ನು ಭಾಷಾ ನೀತಿಯ ಬಗ್ಗೆ ಚರ್ಚೆ ಮಾಡಲು ಒಂದು ಸಭೆ ಕರೆದಿದ್ದರು. ಅದರಲ್ಲಿ ಬಿ ಜೆ.ಪಿ. ಯ ಶ್ರೀ ಗಂಗಾಧರನ್ ಅವರು ಇದ್ದರು, ಕ್ರಾಂತಿಕಾರಿ ಪಕ್ಷದವರು ಇದ್ದರು, ಜನತಾ ಪಾರ್ಟಿ ಸದಸ್ಯರು ಇದ್ದರು, ರಿಪಬ್ಲಿಕನ್ ಪಾರ್ಟಿ ಲೀಡರ್ ಇದ್ದರು, ಮುಸ್ಲೀಂ ಲೀಗ್‌ನ ಸದಸ್ಯರಿದ್ದರು, ಕಾಂಗ್ರೆಸ್ (ಐ)ನ ಸದಸ್ಯರು ಇದ್ದರು. ಹೀಗೆ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಹ ಆ ಸಭೆಯಲ್ಲಿ ಹಾಜರಿದ್ದರು. ಅಲ್ಲಿ ಎಲ್ಲ ವಿಷಯಗಳನ್ನು ಚರ್ಚೆ ಮಾಡಿದ ನಂತರ ಒಂದು ಒಪ್ಪಂದಕ್ಕೆ ಬರಲಾಯಿತು. ನಂತರ ಈ ಭಾಷಾ ಸೂತ್ರದ ಬಗ್ಗೆ ಒಂದು ನಿರ್ಣಯವನ್ನು ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡನೆ ಮಾಡಿದರು.

ಅಧ್ಯಕ್ಷರು.—ಅದು ಸ್ನೇಹ ಸಂಗೀತವಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅವರ ಮನಸ್ಸಿನಲ್ಲಿ ಏನೋ ಇರುತ್ತದೆ. ಅದನ್ನು ಈ ಸದನದ ಸದಸ್ಯರಿಂದ ಅವರು ಅಪೇಕ್ಷೆ ಮಾಡುವುದಾದರೆ ನಾವು ಇಲ್ಲಿ ಕೆಲಸ ಮಾಡುವುದೇ ಕಷ್ಟವಾಗುತ್ತದೆ. ಮತ್ತು ಆ ರೀತಿ ಮಾಡುವುದಕ್ಕೆ ಹೋದರೆ ನಾವು ನಿಯಮಾವಳಿ ಪ್ರಕಾರ ಇಲ್ಲಿ ಕೆಲಸ ಮಾಡುವುದ ಕ್ಕಾಗುವುದಿಲ್ಲ, ಮೇಲ್ಮನೆಯಲ್ಲಿ ಯಾವ ರೀತಿ ಕೆಲಸ ಮಾಡುತ್ತಾರೆಂಬ ಬಗ್ಗೆ ಇಲ್ಲಿ ಮಾತನಾಡುವುದಕ್ಕೆ ನಮಗೆ ಸಂಬಂಧವಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ, ನೆನ್ನೆ ಈ ಸಭೆಯಲ್ಲಿ ಮಂಡನೆ ಮಾಡಿದ ನಿರ್ಣಯಕ್ಕೆ ಪ್ರತಿಯೊಂದು ರಾಜಕೀಯ ಪಕ್ಷದವರೂ ಭಾಗಿಯಾಗಿದ್ದಾರೆ. ಒಂದು ವೇಳೆ ಈ ನಿರ್ಣಯದ ವಿಚಾರದಲ್ಲಿ ಅಲ್ಲೊಂದು ಕಡೆ ಇಲ್ಲೊಂದು ಕಡೆ ಕೆಲವು ರಾಜಕೀಯ ಪಕ್ಷದ ಮುಖಂಡರಿಗೆ ಭಿನ್ನಾಭಿಪ್ರಾಯವಿದ್ದರೂ ಸಹ ಅದನ್ನೇ ಮುಂದುವರಿಸಿಕೊಂಡು ಹೋಗುವುದು ಅವರಿಗೆ ಸರಿಯಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲ ರಾಜಕೀಯ ಪಕ್ಷಗಳೂ ಸೇರಿ ಒಂದು ನಿರ್ಣಯ ತೆಗೆದುಕೊಂಡ ನಂತರ, ಅದನ್ನು ಇಲ್ಲಿ ಮಂಡಿಸಿದ ಮೇಲೆ ಅದರ ಮೇಲೆ ಅಭಿನಂದನಾ ಭಾಷಣ ಮಾಡಲು ಬಹಳ ಕಾಲ ತೆಗೆದುಕೊಳ್ಳುವುದು ಸರಿಯಲ್ಲ ಎಂದು ನಾನು ನೆನ್ನೆ ಹೇಳಿದೆ. ಆದರೂ ಸಭೆ ಏಳೂವರೆ ಗಂಟೆಯವರೆಗೆ ನಡೆಯಿತು. ಇಂತಹ ಒಂದು ವಿಷಯದಲ್ಲಿ ಪತ್ರಿಕೆಯವರು ತಮ್ಮ ''ಸದನ ಸಮೀಕ್ಷೆಯಲ್ಲಿ'' ಈ ಸಭೆಗೆ ಅವಹೇಳನ ಮಾಡುವ ರೀತಿಯಲ್ಲಿ ಬರೆಯುವುದಾದರೆ ನಾವು ಇಲ್ಲಿ ಕೂತು ಕೆಲಸ ಮಾಡುವುದು ಕಷ್ಟವಾಗುತ್ತದೆ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಈ ಸದನ ಪ್ರಾರಂಭವಾದ ಮೇಲೆ ಪ್ರತಿದಿನವೂ ಸದನ ಸಮೀಕ್ಷೆಯಲ್ಲಿ ಬಂದಿರುವಂತಹ ವಿಷಯಗಳನ್ನೆಲ್ಲಾ ಓದಿ ನೋಡಬೇಕು. ಏಕೆಂದರೆ ನೆನ್ನೆ ನಡೆದ ವಿಷಯಕ್ಕೆ ಮಾತ್ರ ಇದು ಸೀಮಿತವಾಗಿಲ್ಲ. ಪ್ರತಿದಿನವೂ ಅವರ ಮನಸ್ಸಿನಲ್ಲಿ

ಏನೇನು ಇರುತ್ತದೋ ಅದನ್ನೆಲ್ಲಾ ಆದರಲ್ಲಿ ತುಂಬುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಾನು ಕಳೆದ ನಾಲ್ಕೈದು ದಿವಸಗಳ ಸದನ ಸಮೀಕ್ಷೆಯನ್ನು ಓದಿದ್ದೇನೆ. ಆದ್ದರಿಂದ ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಆದ್ದರಿಂದ ದಯಮಾಡಿ ತಾವು ಇದರ ಬಗ್ಗೆ ಒಂದು ಅಂತಿಮ ನಿರ್ಣಯ ಕೈಕೊಳ್ಳಬೇಕು. ಇಲ್ಲದಿದ್ದರೆ ನಾವು ಇಲ್ಲಿ ಕೂತು ಕೆಲಸ ಮಾಡುವುದಕ್ಕಾಗುವುದಿಲ್ಲ. ಯಾವ ರೀತಿಯಿಂದಲಾದರೂ ಇದನ್ನು ಕೊನೆಗಾಣಿಸಬೇಕಾಗುತ್ತದೆ. ಕಳೆದ ಸಲ ನಾನು ಇಂಥಾದ್ದೇ ವಿಚಾರವಲ್ಲಿ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿದಾಗ ತಾವು ಆ ಬಗ್ಗೆ ಒಂದು ಕ್ರಮ ತೆಗೆದುಕೊಳ್ಳೋಣ ಎಂದು ಹೇಳಿದ್ದರಿಂದ ನಾನು ಅಲ್ಲಿಗೇ ಕೈಬಿಟ್ಟೆ. ಈಗಲಾದರೂ ಇದಕ್ಕೆ ಒಂದು ಇತಿಶ್ರೀ ಹಾಡಬೇಕಾಗುತ್ತದೆ.

SRI S. M. SHEERNALY CHANDRASHEKAR.—I am moving the Privilege Motion against all the three papers. It is left to you to admit or not.

ಅಧ್ಯಕ್ಷರು.—ನಾನು ಒಂದು ಮಾತನ್ನು ಹೇಳಿದೆ. ಈ ಸಭೆಯ ಬಗ್ಗೆ ಈ ರೀತಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ಅದು ಸರಿಯಾದುದಲ್ಲ, ಅದಕ್ಕೆ ಅವಕಾಶ ಕೊಡುವುದಿಲ್ಲವೆಂದು ನನ್ನ ಅಭಿಪ್ರಾಯ ಹೇಳಿದೆ. ಈ ಸಭೆಯಲ್ಲಿರತಕ್ಕಂಥ ಸದಸ್ಯರು ಯಾವ ರೀತಿ ಇಲ್ಲಿ ಮಾತನಾಡಬೇಕೆಂಬ ಬಗ್ಗೆ ಇನ್ನೊಬ್ಬರಿಂದ ಹೇಳಿಸಿಕೊಂಡು ಮಾತನಾಡುವುದಿಲ್ಲ. ಅವರ ಈ ರೀತಿಯ ವರದಿಯಿಂದ ನಮ್ಮ ಮನಸ್ಸಿಗೆ ಬೇದವಾಗಿದೆ ಎಂದು ಈಗಾಗಲೇ ಈ ಸಭೆಯ ಗಮನಕ್ಕೆ ತಂದಿದ್ದೇನೆ.

ಶ್ರೀ ಎಸ್. ಎಂ. ಶೀರ್ನಾಳಿಚಂದ್ರಶೇಖರ್.—ಇದರಲ್ಲಿ ಮುಖ್ಯವಾದಂಥ ೨ ವಿಚಾರಗಳಿವೆ. ಒಂದು, ತಮ್ಮನ್ನು ಅವಹೇಳನ ಮಾಡಿರುವುದು.

MR. SPEAKER.—Don't put it that way. I have never said it.

ಶ್ರೀ ಎಸ್. ಎಂ. ಶೀರ್ನಾಳಿಚಂದ್ರಶೇಖರ್,—ಎರಡು, ಈ ಮನೆಯನ್ನು ಕೀಳು ದೃಷ್ಟಿಯಿಂದ ನೋಡಿರುವುದು.

MR. SPEAKER.—Otherwise, I will straight away place it before the House. ಆದ್ದರಿಂದ ತಾವು ಆ ರೀತಿ ವ್ಯಾಖ್ಯಾನ ಮಾಡಬೇಕಾಗಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿಚಂದ್ರಶೇಖರ್.—ಅವರು ಮೇಲ್ಮನೆಯನ್ನು ಮಂತ್ರಿ ಈ ಮನೆಯನ್ನು ಹೋಲಿಕೆ ಮಾಡಿಕೊಂಡು ಬರೆದರೆ ಕರ್ನಾಟಕದ ಜನತೆ ಏನು ತಿಳಿದುಕೊಳ್ಳುತ್ತಾರೆ? ಪ್ರಜಾವಾಣಿ ಪತ್ರಿಕೆಯ ಪ್ರಸಾರ ಒಂದೂವರೆ ಲಕ್ಷದಷ್ಟು ಇದೆ. ಇಂತಹ ಒಂದು ಪತ್ರಿಕೆಯಲ್ಲಿ ಈ ಸಭೆ ಉಪಯೋಗವಿಲ್ಲದ ಸಭೆಯೆಂದು ಅವರು ಹೇಳುವುದಾದರೆ ಅದನ್ನು ನಾವು ನೋಡಿಕೊಂಡು ಮತ್ತು ತಾಳಿಕೊಂಡು ಸುಮ್ಮನಿರಬೇಕೇ? ಅವಾಚ್ಯ ಶಬ್ದಗಳಿಂದ ಬೈಯುವಂತಹ ಸದಸ್ಯರು ಇಲ್ಲಿಯೂ ಇರಬೇಕೇ ಎಂದು ಕೇಳಬೇಕಾಗಿದೆ? Don't you think it amounts to breach of privilege of this House. So, I am moving the privilege motion. It is up to you to allow the motion or not.

ಶ್ರೀ ವೈ. ರಾಮಕೃಷ್ಣ.—ಈ ದಿನದ ಪತ್ರಿಕೆಯನ್ನು ನಾನೂ ಸಹ ನೋಡಿದೆ. ಅದರಲ್ಲಿ ಬರೆದಿರುವುದನ್ನು ನೋಡಿ ನನ್ನ ಮನಸ್ಸಿಗೂ ನೋವಾಯಿತು. ಅವರು ತಮ್ಮನ್ನು ಅನಾವಶ್ಯಕವಾಗಿ ಬಯಲಿಗೆಳೆದಿದ್ದಾರೆ. ಇದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದರ ಜೊತೆಗೆ ಈ ಸಭೆಯನ್ನು ಮತ್ತು ಆ ಸಭೆಯನ್ನು ಹೋಲಿಕೆ ಮಾಡಿ ಇವುಗಳಲ್ಲಿ ಯಾವುದು ಮೇಲುಗೈ ಯಾವುದು ಕೆಳಗೈ ಎಂದು ವ್ಯಾಖ್ಯಾನ ಮಾಡಿದ್ದಾರೆ. ವಿರೋಧ ಪಕ್ಷದ ಸದಸ್ಯರಿಂದ ಕರ್ತವ್ಯ ಚ್ಯುತಿಯಾಗಿದೆ ಎಂಬ ಅರ್ಥ ಬರುವ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಇದು ಮಾನ್ಯ ಸದಸ್ಯರ ಹಕ್ಕುಭಾದ್ಯತೆಗೆ ಸಂಬಂಧಪಟ್ಟ ವಿಚಾರ ಮತ್ತು ಈ ಸಭೆಯ ಹಕ್ಕುಭಾದ್ಯತೆಗೆ ಸಂಬಂಧಪಟ್ಟ ವಿಚಾರ ಜೊತೆಗೆ ತಮ್ಮ ಒಂದು ಸ್ಥಾನದ ಗೌರವಕ್ಕೆ ಸಂಬಂಧಪಟ್ಟ ವಿಚಾರ. ಇದೆಲ್ಲವೂ ಇದರಲ್ಲಿ ಅಡಕವಾಗಿರುವುದರಿಂದ ತಾವು ಇದರ ಬಗ್ಗೆ ಒಂದು ಸಮಯ ಗೊತ್ತು ಮಾಡುವುದಾದರೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾರೆ. ಆನಂತರ ತಾವು ಏನು ರೂಲಿಂಗ್ ಕೊಡುತ್ತೀರೋ ಕೊಡಿ. ಈ ವಿಚಾರದಲ್ಲಿ ಸನ್ಮಾನ್ಯ ಚಂದ್ರಶೇಖರ್ ಅವರು ಪ್ರಿವಿಲೇಜ್ ಮೋಷನ್ ಮೂವ್ ಮಾಡುವುದಾದರೆ, it is his

prerogative to move the motion and it is for you to consider whether privilege is involved or not.

SRI M. V. RAJASHEKARAN (Uttarahalli).—Mr. Speaker, what has happened yesterday certainly calls for the attention of the members as well as people who are concerned about it. Particularly, it is our bounden duty to uphold the dignity of this House as well as the Speaker. Every one of us do agree with that but at the same time we have to take certain things also into consideration. What I would like to plead with you is, let us not take this issue too far. One thing I would like to say is, like Judiciary, Executive and Legislature, the Press also has got equal role to play in upholding the democratic principles in this country. Any way, Mr. Speaker, I would like to plead with you that we have already given vent to the feelings of the majority of this House and we do not want to see that such things should recur in this House or outside the House. I am sure that you will see that the whole matter is dealt with appropriately without taking these things too far. This is my submission.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಸದಸ್ಯರಾದ ರಾಜಶೇಖರನ್‌ರವರು ಇದನ್ನು ಇಷ್ಟೊಂದು ಲಘುವಾಗಿ ಹೇಳುವುದಾದರೆ, ಅದು ನನಗೆ ದುಃಖದ ಸಂಗತಿ ಎನಿಸುತ್ತದೆ.

SRI K. BHASKAR NAIDU.—Mr. Speaker Sir, I also read this morning. The Speaker's position is such a prestigious position, perhaps more than anybody's in this House. It is the Speaker's prestige that must be kept up and the papers which have written about it, perhaps must have been urchins as far as I am concerned and in general. I am telling that he might not know, perhaps what is the respect the press has to give to the Speaker of this House and also to the Members. Sri Arumugham very correctly said that if they do not find a place here they can go and sit anywhere and report what is happening in this House. Fortunately, we must thank late Sri K. Hanumanthaiah who has constructed such a beautiful building and made us sit comfortably and the press also. Perhaps, he did not know that so many people will be coming. Government is also very generous in giving a chance for all mushroom papers coming up everyday by providing advertisements. That is why they want to threaten the Government and the Speaker also and they can write anything. Press has got a certain duty. They are bound by certain morals. If they miss morals, well, as an individual I can miss morals. The Paper is like mirror. It should mirror the opinion of the people and must know exactly what is happening, and what is right and what is wrong. As far as I am concerned, I am not at all bothered about it, because they do not know even my initials ; they put it as B. Bhaskar Naidu and not as K. Bhaskar Naidu. That is

a different matter. What they wanted perhaps, was to create panic in the minds of the people, create a trouble. The whole trouble is that they wanted to put down the Chief Minister and this House. But, Chief Minister has got over. He came up with more glory yesterday. He achieved that glory by passing an unanimous resolution which the press did not want. In the Parliament hardly you can find seats for about 30 to 40 people. I saw it from the top. They have made particular seats for certain foreign correspondents and certain others for other correspondents. Here correspondents come. Sometimes I find press gallery empty when they have their duty. Sometimes one man sits there. Suppose I question why was it empty, he may say 'it is my privilege'. If he has got his privilege, we have got our privilege also. They have to project what is happening here to the people. It is their bounden duty to come here, and do their duty properly. That is, as far as they are concerned. As a Speaker you may excuse. You might say alright or some other Members might plead for lenience. But, we have a case here in this House. You derive that power from this place. I want that the Privilege motion to be moved by my honourable friend Sri Sheernaly Chandrashekhar be taken up.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ. ನಾನು ಒಂದು ಪ್ರಿವಿಲೇಜ್ ಮೋಷನ್‌ನ್ನು ಕೊಟ್ಟಿದ್ದೇನೆ.

SRI K. BHASKAR NAIDU.—What action you are going to take, we leave it to you now and we still press that privilege motion must be taken.

ಶ್ರೀ ಹೆಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ, ಈ ಸದನದ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿರತಕ್ಕ ವಿಚಾರ ಇದು. ಇದು ಪತ್ರಿಕಾ ಕರ್ತರಿಗೆ ಮತ್ತು ಪ್ರಜೆಗಳನ್ನು ಪ್ರತಿನಿಧಿಸ ತಕ್ಕವರಿಗೆ ಸಂಬಂಧಪಟ್ಟಿದ್ದು. ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಚಾರದಿಂದ ಇಡೀ ಸದನಕ್ಕೇ ಒಂದು ಹೊಡೆತ ಬಿದ್ದಿದೆಯೆಂದು ನನಗನ್ನಿಸುತ್ತದೆ. ಮಾನ್ಯ ಸದಸ್ಯರಾದ ಚಂದ್ರಶೇಖರ್‌ರವರು ತಂದಿರುವ ಪ್ರಿವಿಲೇಜ್ ಮೋಷನ್‌ನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಏಕೆಂದರೆ, ಹಿಂದೆಂದೂ ಇಂಥಾದ್ದು ನಡೆದಿರಲಿಲ್ಲ. ಆದ್ದರಿಂದ ಮುಂದೆ ಕೂಡ ಇಂಥಾದ್ದು ನಡೆಯುವುದಕ್ಕೆ ಅವಕಾಶವನ್ನು ಕೊಡಬಾರದೆಂದು ತಮ್ಮಲ್ಲಿ ನಾನು ತುಂಬಾ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ಈಗತಾನೆ ನನಗೆ ನೋಟೀಸ್ ಬಂದಿದೆ. ಇದನ್ನು ನಾನು ನೋಡಬೇಕಾಗುತ್ತದೆ, ಆಲ್ಲದೆ ನಾವೂ ಕೂಡ ರೂಲ್ಸ್ ಪ್ರಕಾರವೇ ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಹಾಗಾದರೆ ಇದನ್ನು ನಾಳೆ ಹಾಕುತ್ತೀರಾ? ಅಥವಾ ಬೇರೆ ಯಾವ ದಿವಸ ಹಾಕುತ್ತೀರಾ?

ಅಧ್ಯಕ್ಷರು.—ಅದನ್ನು ತಾವು ನನಗೆ ಬಿಡಿ.